ಓಎಸ್. 196/2001 ಡಿಡಬ್ಲ್ಯೂ- 1

ದಿನಾಂಕಃ 10-10-2014 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಿದೆ.

ಈ ದಿನ ಅಂದರೆ ದಿನಾಂಕಃ 10-10-2014 ರಂದು ಈ ಸಾಕ್ಷಿದಾರರು ಹಾಜರಾಗಿ ತಮ್ಮ ಸಾಕ್ಷಿ ಪ್ರಮಾಣ ಪತ್ರವನ್ನು ಹಾಕುವುದಾಗಿ ನುಡಿದಿದ್ದಾರೆ. ನಂತರ ಈ ಸಾಕ್ಷಿದಾರರನ್ನು ಸಾಕ್ಷಿ ಕಟಕಟೆಗೆ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಃ ಶ್ರೀ ಆರ್‌ಎಸ್‌ಎನ್ ವಕೀಲರಿಂದ ಃ

ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಸರಿಯಾಗಿ ನಮ್ಮ ವಕೀಲರು ತಯಾರು ಮಾಡಿದ್ದಾರೆ ಮತ್ತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ. ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಕುಟುಂಬದ ವಂಶವೃಕ್ಷದ ಪ್ರಮಾಣಪತ್ರ ನಿಡಿ 1, ಮಂಜೂರಾತಿ ಪತ್ರ ನಿಡಿ 2, ಮ್ಯುಟೇಷನ್ ರಿಜಿಸ್ಟರ್‌ನ ದೃಢೀಕೃತ ನಕಲನ್ನು ನಿಡಿ 3, ಆರ್‌ಟಿಸಿಯ ದೃಢೀಕೃತ ನಕಲನ್ನು ನಿಡಿ 4, ಪಟ್ಟಾಪುಸ್ತಕವನ್ನು ನಿಡಿ 5 ಎಂದು ಗುರುತಿಸಲಾಯಿತು. ದಾವೆಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲುಃ ವಾದಿ ಪರ ವಕೀಲರು ಗೈರು ಹಾಜರಾಗಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇ ಒ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಚಾಮರಾಜನಗರ.